ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI » KALABURAGI
ಶನಿವಾರ 25 ಜನವರಿ 2020
25 JANUARY 2020

# ಕಲಬುರಗಿ ಲೋಕಲ್ ಎಕ್ಸ್‌ಪ್ರೆಸ್

### ಗ್ರಾಹಕರೊಂದಿಗೆ ಸಂವಾದ ನಡೆಸಿದ ಜೆಸ್ಕಾಂ ಎಂಡಿ ರಾಗಪ್ರಿಯಾ

## ವಿದ್ಯುತ್ ಸಮಸ್ಯೆ ಪರಿಹರಿಸಿಕೊಳ್ಳಿ

■ ವಿಜಯವಾಣಿ ಸುದ್ದಿಜಾಲ ಕಲಬುರಗಿ

ಗ್ರಾಹಕರಿಗೆ ಉತ್ತಮ ಸೇವೆ ನೀಡಲು ಸಾಕಷ್ಟು ಕ್ರಮ ಕೈಗೊಳ್ಳಲಾಗಿದೆ. ಯಾವುದೇ ವಿದ್ಯುತ್ ಸಮಸ್ಯೆಗಳಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬೇಕು ಎಂದು ಜೆಸ್ಕಾಂ ವ್ಯವಸ್ಥಾಪಕ ನಿರ್ದೇಶಕಿ ಡಾ.ಆರ್. ರಾಗಪ್ರಿಯಾ ಸಲಹೆ ನೀಡಿದರು.

ನಿಗಮ ಕಚೇರಿಯಲ್ಲಿ ಶುಕ್ರವಾರ ಗ್ರಾಹಕರೊಂದಿಗೆ ಸಂವಾದ ನಡೆಸಿ ಸಮಸ್ಯೆ ಆಲಿಸಿದ ಅವರು, ನಗರ ವ್ಯಾಪ್ತಿಯಲ್ಲಿ ಅಪಾಯಕಾರಿ ಕಂಬಗಳ ಸ್ಥಳಾಂತರ ಜತೆಗೆ ವಿದ್ಯುತ್ ಪರಿವರ್ತಕಗಳ ಸುತ್ತ ತಂತಿ ಬೇಲಿ ಅಳವಡಿಸಲು ಅಧಿಕಾರಿಗಳಿಗೆ ಸೂಚಿಸಿದರು.

ನಗರ ಪ್ರದೇಶದ ಎಲ್ಲ ಬೀದಿ ದೀಪ ಸ್ಥಾವರಗಳಿಗೆ ವಿದ್ಯುತ್ ಮಾಪಕ ಅಳವಡಿಸಬೇಕು. ನಗರ ಉಪ ವಿಭಾಗ-1 ರಲ್ಲಿ ಹೆಚ್ಚುವರಿ ನಗದು ಶಾಖೆ ತೆರೆಯಲು ಪ್ರಸ್ತಾವನೆ ಸಲ್ಲಿಸಬೇಕು. ಶಹಾಬಜಾರ, ಶೇಖ ರೋಜಾ ಪ್ರದೇಶದಲ್ಲಿ ಅಪಾಯಕಾರಿ ಎನಿಸಿರುವ ವಿದ್ಯುತ್ ವಾಹಕ ತೆರವುಗೊಳಿಸಿ ಕೇಬಲ್ ಅಳವಡಿಸಲು ಮತ್ತೊಮ್ಮೆ ಟೆಂಡರ್ ಕರೆಯಬೇಕು. ಎಚ್.ಟಿ. ಗ್ರಾಹಕರಿಗೆ ನಿಗದಿತ ಸಮಯದಲ್ಲಿ ಬಿಲ್ ನೀಡಿ ಆರ್‌ಟಿಜಿಎಸ್ ಮೂಲಕ ಪಾವತಿಸಿದ ಹಣದ ರಸೀದಿಯನ್ನು ಕೂಡಲೇ ಗ್ರಾಹಕರಿಗೆ ತಲುಪಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ವಿಜಯವಾಣಿ ಚಿತ್ರ




ಕಲಬುರಗಿ ಜೆಸ್ಕಾಂ ಕಚೇರಿಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಸಂವಾದದಲ್ಲಿ ಗ್ರಾಹಕರ ಸಮಸ್ಯೆ ಆಲಿಸಿ ವ್ಯವಸ್ಥಾಪಕ ನಿರ್ದೇಶಕಿ ಡಾ.ಆರ್. ರಾಗಪ್ರಿಯಾ ಮಾತನಾಡಿದರು.

## ಉಚಿತ ತರಬೇತಿ ಶಿಬಿರ

**ಕಲಬುರಗಿ:** ನಗರದ ಶ್ರೀವಿದ್ಯಾ ಮಹಿಳಾ ಡಿಗ್ರಿ ಕಾಲೇಜ್‌ನಲ್ಲಿ ಪಿಯುಸಿ ದ್ವಿತೀಯ ವರ್ಷದ ಅಕೌಂಟೆನ್ಸಿ ವಿಷಯದ ಕುರಿತು ಫೆ.5ರವರೆಗೆ ಉಚಿತ ತರಬೇತಿ ಶಿಬಿರ ನಡೆಯಲಿದೆ ಎಂದು ಪ್ರಾಂಶುಪಾಲ ಡಾ.ಕವಿರಾಜ ಪಾಟೀಲ್ ತಿಳಿಸಿದ್ದಾರೆ. ಪಿಯುಸಿ ದ್ವಿತೀಯ ವರ್ಷದ ವಾಣಿಜ್ಯ ವಿಭಾಗದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದ್ದಾರೆ. ಮಾಹಿತಿಗೆ 9886604987/ 8880203830 ಸಂಪರ್ಕಿಸಿ.